SHRIDHARA H D
Digitally signed by SHRIDHARA H D
Date: 2026.04.08 16:50:42 +0530

KACD320012982020

ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್ ಸಿ ರವರ ನ್ಯಾಯಾಲಯ, ಹಿರಿಯೂರು

ಉಪಸ್ಥಿತರು : **ಶ್ರೀ. ಶ್ರೀಧರ ಹೆಚ್ ಡಿ**
ಬಿ.ಎ., ಎಲ್.ಎಲ್.ಬಿ.
ಸಿ/ಸಿ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್ ಸಿ, ಹಿರಿಯೂರು,.

**ಸಿ.ಸಿ. ನಂ. 1096 / 2020**

**ದಿನಾಂಕ 2 ನೇ ಏಪ್ರಿಲ್ 2026**

ಪಿರ್ಯಾದುದಾರರು: ಅರಕ್ಷಕ ವೃತ್ತ ನಿರೀಕ್ಷಕರು,
ಹಿರಿಯೂರು ವೃತ್ತ, ಐಮಂಗಲ ಪೊಲೀಸ್ ಠಾಣೆ,
ಹಿರಿಯೂರು ತಾಲ್ಲೂಕು
(ಸಹಾಯಕ ಸರ್ಕಾರಿ ಅಭಿಯೋಜಕರು)

ವಿರುದ್ಧ

ಆರೋಪಿತ/ರು : ಸಂತೋಷ್ ತಂಡಲೆ ಬಿನ್ ಕಿಶನ್,
ವಯಸ್ಸು ಸುಮಾರು 26 ವರ್ಷ,
ವಾಸಃ ಚಾದ್ರಿಚೌಡಿ ಗ್ರಾಮ,
ಚಕ್ರವಾಡಿ ಅಂಚೆ, ಮಹಾರಾಷ್ಟ್ರ

(ಪರವಾಗಿ ಶ್ರೀ ಬಿ. ಎಲ್. ಎಸ್., ವಕೀಲರು)

| | | | |
|---|---|---|---|
| 01 | ಅಪರಾಧವು ಘಟಿಸಿದ ದಿನಾಂಕ | :- | 25.05.2019 |
| 02 | ಅಪರಾಧವನ್ನು ವರದಿ ಮಾಡಿದ ದಿನಾಂಕ | :- | 25.05.2019 |
| 03 | ದೂರುದಾರನ ಹೆಸರು | :- | ಪಿ. ಉಮೇಶ |

| | | | |
|---|---|---|---|
| 04 | ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ | :- | 15.03.2024 |
| 05 | ಸಾಕ್ಷಿದಾರರ ವಿಚಾರಣೆ ಮುಕ್ತಾಯವಾದ ದಿನಾಂಕ | :- | 03.10.2025 |
| 06 | ಅಪರಾಧಗಳ ಕಲಂ ಗಳು | :- | ಭಾ. ದಂ. ಸಂ. ಕಲಂ 279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ |
| 07 | ನ್ಯಾಯಾಧೀಶರ ಅಂತಿಮ ನಿರ್ಣಯ | :- | ಖುಲಾಸೆ ಮಾಡಿ ಆದೇಶಲಾಗಿದೆ |

SHRIDHARA H D
Digitally signed by SHRIDHARA H D
Date: 2026.04.08 16:50:52 +0530

**(ಶ್ರೀಧರ ಹೆಚ್ ಡಿ)**

ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ. ಎಫ್. ಸಿ

ನ್ಯಾಯಾಧೀಶರು ಹಿರಿಯೂರು.

**:-ತೀರ್ಪು -:**

ಹಿರಿಯೂರು ತಾಲ್ಲೂಕು, ಐಮಂಗಲ ಪೊಲೀಸ್ ಠಾಣೆ, ಹಿರಿಯೂರು ವೃತ್ತ ನಿರೀಕ್ಷಕರು ಆರೋಪಿತನ ವಿರುದ್ಧ ಭಾ. ದಂ.ಸಂ. ಕಲಂ 279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ವೇನೆಂದರೆಃ-

ದಿನಾಂಕಃ25.05.2019 ರಂದು ಬೆಳಗಿನ ಜಾವ 00.15 ಎ.ಎಂ. ಸಮಯದಲ್ಲಿ, ಹಿರಿಯೂರು ತಾಲೂಕು ಗುಯಿಲಾಳು ಟೋಲ್ ಪ್ಲಾಜಾದ ಹತ್ತಿರ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆಗೆ ಬರುವ ಎನ್ ಹೆಚ್ 4 ರಸ್ತೆಯಲ್ಲಿ ಟೋಲ್ ಪ್ಲಾಜಾದ ಹತ್ತಿರ ಸಾಕ್ಷಿ-1 ರವರು ಸಾಕ್ಷಿ-2 ಮತ್ತು 3 ಅವರೊಂದಿಗೆ ಚಿತ್ರದುರ್ಗ ಕಡೆಯಿಂದ ಬರುವ ವಾಹನಗಳನ್ನು ತವಾಸಣೆ ಮಾಡುತ್ತಿದ್ದಾಗ ಆರೋಪಿತನು ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆ ಹೋಗಲು MH-

14-GU-8052 ನೇ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು ಒಂದು ರಸ್ತೆಯ ಬದಿಯಲ್ಲಿ ನಿಂತಿದ್ದ ಸಾಕ್ಷಿ-1 ರವರ ಜೀಪ್ ಚಾಲಕ ಸುರೇಶ್ ಎಂಬುವರಿಗೆ ಡಿಕ್ಕಿ ಹೊಡೆಸಿ ಸ್ಥಳದಲ್ಲಿ ಲಾರಿಯನ್ನು ನಿಲ್ಲಿಸದೇ ಹೋರಟು ಹೋಗಿದ್ದರಿಂದ ಸುರೇಶ್ ರವರಿಗೆ ತಲೆಗೆ, ಬಲ ಭುಜಕ್ಕೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು ಮೂಗಿನಲ್ಲಿ ಮತ್ತು ಕಿವಿಯಲ್ಲಿ. ರಕ್ತ ಬಂದಿದ್ದು ಚಿಕಿತ್ಸೆಗಾಗಿ ಚಿತ್ರದುರ್ಗ ಬಸವೇಶ್ವರ ಆಸ್ಪತ್ರೆಗೆ ವೈದ್ಯರಲ್ಲಿ ತೋರಿಸಿ ನಂತರ ವೈದ್ಯರ ಸಲಹೆ ಮೇರೆಗೆ ದಾವಣಗೆರೆ ಎಸ್ ಎಸ್ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲು ಮಾಡಿದ್ದು ಚಿಕಿತ್ಸೆ ಫಲಕಾರಿಯಾಗದೇ ಬೆಳಗಿನ ಜಾವ ಸುಮಾರು ಮೂರು ಗಂಟೆಗೆ ಮೃತಪಟ್ಟಿರುತ್ತಾರೆ ಎಂಬುದಾಗಿರುತ್ತದೆ.

3. ಸದರಿ ದೂರಿನನ್ವಯ ಐಮಂಗಲ ಪೋಲೀಸರು ಠಾಣಾ ಮೊಕದ್ದಮೆ ಸಂಖ್ಯೆ. 89/2019 ರಲ್ಲಿ ಭಾ. ದಂ.ಸಂ. ಕಲಂ 279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ ರಡಿಯಲ್ಲಿ ಆರೋಪಿತನ ವಿರುದ್ಧ ಪ್ರಕರಣ ದಾಖಲು ಮಾಡಿ ಕೊಂಡಿರುತ್ತಾರೆ. ನಂತರ ಹಿರಿಯೂರು ವೃತ್ತ ನಿರೀಕ್ಷಕರು ತನಿಖೆ ಪೂರೈಸಿ ನಂತರ ಆರೋಪಿತನ ವಿರುದ್ಧ ಭಾ. ದಂ.ಸಂ. ಕಲಂ 279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ ರಡಿಯಲ್ಲಿ ಈ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿದೆ.

4. ದೋಷಾರೋಪಣಾ ಪಟ್ಟಿ ಸಲ್ಲಿಸಿದ ನಂತರ ಆರೋಪಿತನ ವಿರುದ್ಧ ಭಾ. ದಂ.ಸಂ. ಕಲಂ.279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ ರಡಿಯಲ್ಲಿ ಆರೋಪಿತನ ವಿರುದ್ಧ ಮಾಡಲಾದ ಅಪರಾಧಗಳ ಬಗ್ಗೆ ಸಂಜ್ಞೆತೆಯನ್ನು ತೆಗೆದುಕೊಳ್ಳಲಾಯಿತು. ನ್ಯಾಯಾಲಯದಿಂದ ಆರೋಪಿತರಿಗೆ ಸಮನ್ಸ್ ನೀಡಲಾಗಿ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ವಕೀಲರನ್ನು ನೇಮಿಸಿಕೊಂಡು ನ್ಯಾಯಾಲಯದಿಂದ ಜಾಮೀನು ಪಡೆದು ಕೊಂಡಿರುತ್ತಾರೆ.

5. ದಂಡ ಪ್ರಕ್ರಿಯ ಸಂಹಿತೆ ಕಲಂ 207 ರಡಿಯಲ್ಲಿ ದೋಷಾರೋಪಣಾ ಪಟ್ಟಿಯ ನಕಲನ್ನು ಆರೋಪಿತನಿಗೆ ನೀಡಿ, ನಂತರ ಆರೋಪಿತನ ಪರ ವಕೀಲರು ಹಾಗೂ ಸಹಾಯಕ ಸರ್ಕಾರಿ ಅಭಿಯೋಜಕರ ವಾದ ಆಲಿಸಿ,

ಆರೋಪಿತನ ವಿರುದ್ದ ಭಾ. ದಂ.ಸಂ. ಕಲಂ 279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ ರಡಿಯಲ್ಲಿ ದೋಷಾರೋಪಣೆಯನ್ನು ರಚಿಸಿ ಆರೋಪಿತನಿಗೆ ಅರ್ಥವಾಗುವ ಭಾಷೆಯಲ್ಲಿ ಓದಿ, ಹೇಳಿ ವಿವರಿಸಲಾಗಿ, ಆರೋಪಿತನು ತನ್ನ ವಿರುದ್ದದ ಆರೋಪಣೆಯನ್ನು ಅಲ್ಲಗಳೆದು ವಿಚಾರಣೆಯಾಗ ಬೇಕೆಂದು ಕೇಳಿ ಕೊಂಡಿರುತ್ತಾರೆ.

6. ಆರೋಪಿತನ ಮೇಲಿನ ಆರೋಪವನ್ನು ಸಾಭೀತು ಪಡಿಸುವ ಸಲುವಾಗಿ ಅಭಿಯೋಜನೆಯು ಒಟ್ಟು 10 ಸಾಕ್ಷಿದಾರರನ್ನು ಪ್ರಾಸಾ-1 ರಿಂದ 10 ರಂತೆ ವಿಚಾರಣೆಗೆ ಒಳಪಡಿಸಿ ಕೊಂಡು, ಒಟ್ಟು 14 ದಾಖಲಾತಿಗಳನ್ನು ನಿಪಿ-1 ರಿಂದ 14 ರಂತೆ ಗುರುತಿಸಿ ಕೊಂಡಿರುತ್ತದೆ.

7. ಅಭಿಯೋಜನೆಯ ಸಾಕ್ಷ್ಯ ವಿಚಾರಣೆ ಮುಕ್ತಾಯದ ನಂತರ ದಂಡ ಪ್ರಕ್ರಿಯೆ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ದಾಖಲು ಮಾಡಿಕೊಳ್ಳಲಾಯಿತು, ಆರೋಪಿತನು ತನ್ನ ವಿರುದ್ಧದ ಅಭಿಯೋಜನೆಯ ಸಾಕ್ಷ್ಯವನ್ನು ಅಲ್ಲಗಳೆದು, ತನ್ನ ಪರವಾಗಿ ಪ್ರತಿವಾದ ಸಾಕ್ಷ್ಯ ಮಂಡಿಸುವುದಿಲ್ಲ ಎಂದು ನುಡಿದಿರುತ್ತಾರೆ.

8. ಪ್ರಕರಣದಲ್ಲಿ ಉಭಯ ಪಕ್ಷಕಾರರ ವಾದ ಆಲಿಸಿ ಕಡತ ಪರಿಶೀಲಿಸಿದ ನಂತರ ಈ ಕೆಳಗಿನ ನಿರ್ಣಯಾಂಶಗಳು ಉದ್ಭವಿಸಿವೆ .

**: ಅಂಶಗಳು :**

1. ದಿನಾಂಕಃ25.05.2019 ರಂದು ಬೆಳಗಿನ ಜಾವ 00.15 ಎ.ಎಂ. ಸಮಯದಲ್ಲಿ, ಹಿರಿಯೂರು ತಾಲೂಕು ಗುಯಿಲಾಳು ಟೋಲ್ ಪ್ಲಾಜಾದ ಹತ್ತಿರ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆಗೆ ಬರುವ ಎನ್ ಹೆಚ್ 4 ರಸ್ತೆಯಲ್ಲಿ ಟೋಲ್ ಪ್ಲಾಜಾದ ಹತ್ತಿರ ಸಾಕ್ಷಿ-1 ರವರು ಸಾಕ್ಷಿ-2 ಮತ್ತು 3 ರವರೊಂದಿಗೆ ಚಿತ್ರದುರ್ಗ ಕಡೆಯಿಂದ ಬರುವ ವಾಹನಗಳನ್ನು ತವಾಸಣೆ ಮಾಡುತ್ತಿದ್ದಾಗ

ಆರೋಪಿತನು ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆ ಹೋಗಲು MH-14-GU-8052 ನೇ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗುವಂತೆ ನಡೆಸಿಕೊಂಡು ಬಂದು ರಸ್ತೆಯ ಬದಿಯಲ್ಲಿ ನಿಂತಿದ್ದ ಸಾಕ್ಷಿ-1 ರವರ ಜೀಪ್ ಚಾಲಕ ಸುರೇಶ್ ಎಂಬುವರಿಗೆ ಡಿಕ್ಕಿ ಪಡಿಸಿ ಅಪಘಾತ ಮಾಡುವ ಮೂಲಕ ಭಾ ದಂ ಸಂ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ?

2. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆ ಹೋಗಲು MH-14-GU-8052 ನೇ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯಕಾರಿಯಾಗುವಂತೆ ನಡೆಸಿಕೊಂಡು ಬಂದು ಡಿಕ್ಕಿ ಪಡಿಸಿದ ಪರಿಣಾಮ ಸುರೇಶ್ ರವರಿಗೆ ತಲೆಗೆ, ಬಲ ಭುಜಕ್ಕೆ ಪೆಟ್ಟುಗಳು ಬಿದ್ದು ರಕ್ತಗಾಯಗಳಾಗಿದ್ದು ಮೂಗಿನಲ್ಲಿ ಮತ್ತು ಕಿವಿಯಲ್ಲಿ. ರಕ್ತ ಬಂದಿದ್ದು ಮೃತಪಡುವಂತೆ ಮಾಡುವ ಮೂಲಕ ಆರೋಪಿಯು ಭಾ ದಂ ಸಂ ಕಲಂ 304A ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ ?

4. ಮೇಲೆ ಹೇಳಿದ ದಿನಾಂಕ, ಸ್ಥಳ ಮತ್ತು ಸಮಯದಲ್ಲಿ ಆರೋಪಿತನು ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆ ಹೋಗಲು MH-14-GU-8052 ನೇ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ನಡೆಸಿಕೊಂಡು

ಒಂದು ರಸ್ತೆಯ ಬದಿಯಲ್ಲಿ ನಿಂತಿದ್ದ ಸಾಕ್ಷಿ-1 ರವರ ಜೀಪ್ ಚಾಲಕ ಸುರೇಶ್ ಎಂಬುವರಿಗೆ ಡಿಕ್ಕಿ ಪಡಿಸಿ ಅಪಘಾತದ ಬಗ್ಗೆ ಪೊಲೀಸರಿಗೆ ಮಾಹಿತಿಯನ್ನು ನೀಡದೆ ಸದರಿ ವಾಹನವನ್ನು ಅಪಘಾತ ಸ್ಥಳದಿಂದ ಹಾಗೆಯೇ ತೆಗೆದುಕೊಂಡು ಹೋಗುವ ಮೂಲಕ ಮೋ. ವಾ. ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾನೆ ಎಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸುತ್ತದೆಯೆ ?

5. ಏನು ಆದೇಶ ?

9. ಈ ಮೇಲಿನ ಅಂಶಗಳಿಗೆ ನನ್ನ ಉತ್ತರ ಈ ಕೆಳಗಿನಂತಿದೆ.

ಅಂಶ 1:- ನಕಾರಾತ್ಮಕವಾಗಿ,

ಅಂಶ 2:- ನಕಾರಾತ್ಮಕವಾಗಿ,

ಅಂಶ 3:- ನಕಾರಾತ್ಮಕವಾಗಿ,

ಅಂಶ 4:- ಈ ಕೆಳಕಂಡ ಕಾರಣಗಳಿಗಾಗಿ ಅಂತಿಮ ಆದೇಶ,

## ಕಾ ರ ಣ ಗ ಳು

10. **ಅಂಶ 1 ರಿಂದ 3 :-** ಈ ಮೂರು ಅಂಶಗಳು ಏಕಘಟನೆಯಿಂದ ಉದ್ಭವಿಸಿರುವುದರಿಂದ ಚರ್ಚೆಯ ಪುನರಾವರ್ತನೆ ತಪ್ಪಿಸುವ ಸಲುವಾಗಿ ಈ ಮೂರು ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

11. ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶವನ್ನು ಈಗಾಗಲೇ ಹೇಳಲಾಗಿರುತ್ತದೆ. ಫ್ರಾಸಾ-1 ಉಮೇಶ್. ಪಿ, ದೂರುದಾರರು, ಫ್ರಾಸಾ-2 ಮಂಜುನಾಥ ಮತ್ತು ಫ್ರಾಸಾ-3 ಸತ್ತಾರ್ ಪ್ರತ್ಯಕ್ಷ ಸಾಕ್ಷಿದಾರರು, ಫ್ರಾಸಾ-4 ಅಕ್ಬರ್ ಮತ್ತು ಫ್ರಾಸಾ-5 ರಂಗನಾಥ ಕೃತ್ಯ ನಡೆದ ಸ್ಥಳ ಪಂಚನಾಮೆ ಸಾಕ್ಷಿದಾರರು,

ಪ್ರಾಸಾ–6 ಚಂದ್ರಪ್ಪ ಅಮಾನತ್ತು ಪಂಚನಾಮೆ ಸಾಕ್ಷಿದಾರರು, ಪ್ರಾಸಾ–7 ಈರೇಶ್. ಟಿ, ಮುಖ್ಯಪೇದೆ, ಪ್ರಾಸಾ–8 ಚನ್ನೇಗೌಡ. ಆರ್. ಜಿ. ಇವರು ಪೋಲಿಸ್ ಅಧಿಕಾರಿಗಳು/ತನಿಖಾಧಿಕಾರಿಗಳು, ಪ್ರಾಸಾ–9 ದಯಾನಂದ ವಾಹನದ ಮಾಲೀಕರು, ಪ್ರಾಸಾ–10 ಜಿ. ಎಸ್. ಹೆಗಡೆ ಸಾರಿಗೆ ಅಧಿಕಾರಿಗಳು ಇರುತ್ತಾರೆ. ನಿಪಿ–1 ದೂರು, ನಿಪಿ–2 ಕೃತ್ಯ ನಡೆದ ಸ್ಥಳ ಪಂಚನಾಮೆ, ನಿಪಿ–3 ಕಚ್ಚಾನಕಾಶೆ, ನಿಪಿ–4 ಶವತನಿಖಾ ವರದಿ, ನಿಪಿ–5 ಶವಪರೀಕ್ಷಾ ವರದಿ, ನಿಪಿ–6 ಐ ಎಂ ವಿ ವರದಿ, ನಿಪಿ–7 ಅಮಾನತ್ತು ಪಂಚನಾಮೆ, ಪ್ರಾಸಾ–3 ರವರ ಹೇಳಿಕೆ, ನಿಪಿ–8 ಕಲಂ 133 ರಡಿಯಲ್ಲಿ ಐ.ಎಂ.ವಿ. ನೋಟಿಸ್, ನಿಪಿ–9 ಕಲಂ 133 ರಡಿಯಲ್ಲಿ ಐ ಎಂ ವಿ ನೋಟಿಸ್‌ಗೆ ಉತ್ತರ, ನಿಪಿ–10 ಇಂಡಿಮ್ನಿಟಿ ಮುಚ್ಚಳಿಕೆ, ನಿಪಿ–11 ಕರ್ತವ್ಯ ದೃಡೀಕರಣ ಪತ್ರ ನೀಡುವ ಬಗ್ಗೆ ಮನವಿ ಪತ್ರ, ನಿಪಿ–12 ಪ್ರಥಮ ವರ್ತಮಾನ ವರದಿ, ನಿಪಿ–13 ಸ್ವತ್ತು ಪಟ್ಟಿ, ನಿಪಿ–14 ಕರ್ತವ್ಯ ದೃಡೀಕರಣ ಪತ್ರ ನೀಡುವ ಬಗ್ಗೆ ಮನವಿ ಪತ್ರ ಆಗಿರುತ್ತವೆ.

12. ಪ್ರಾಸಾ–1 ಉಮೇಶ್. ಪಿ. ಇವರು ದೂರುದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ24.05.2019 ರಂದು ತಾನು ಮೃತ ಸುರೇಶ್ ಹಾಗೂ ಚಾಸಾ–2 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ನಾವುಗಳು ನಮ್ಮ ಜೀಪ್ ಸಂ.KA–16–G–3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸಿದ ಹೋಗಿರುತ್ತದೆ. ಸದರಿ ಲಾರಿಯ ಸಂಖ್ಯೆ: MH–14–GU–8052 ಆಗಿರುತ್ತದೆ. ಅಪಘಾತದಿಂದಾಗಿ ನಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ತೀವ್ರವಾಗಿ ಪೆಟ್ಟು ಬಿದ್ದು, ಕಿವಿ ಮತ್ತು ಮೂಗಿನಲ್ಲಿ ರಕ್ತ ಬರುತ್ತಿತ್ತು. ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್‌ನಲ್ಲಿ ಕರೆದುಕೊಂಡು

ಹೋಗಿರುತ್ತೇವೆ. ಎಸ್ ಎಸ್ ಆಸ್ಪತ್ರೆಯ ವೈದ್ಯರು ಬೆಳಗಿನ ಜಾವ 3.00 ಸಮಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ. ಅದೇ ದಿನ ಬೆ.6.00 ಗಂಟೆಗೆ ಐಮಂಗಲ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿರುತ್ತೇನೆ. ಅಪಘಾತದ ದಿನ ಆರೋಪಿಯು ಸದರಿ ಲಾರಿಯ ಚಾಲಕನಾಗಿರುತ್ತಾನೆ ಎಂದು ನುಡಿಯುತ್ತಾರೆ. ದಿಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಈ ಅಪಘಾತಕ್ಕೆ ಆರೋಪಿಯ ಅತೀವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ ಎಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

13. ಸದರಿ ಪ್ರಾಸಾ-1 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ದಿಃ24.05.2019 ರಂದು ತಪಾಸಣೆಗೆ 4 ಜನ ಹೋಗಿರುತ್ತೇವೆ. ಅದರಲ್ಲಿ ಚಾಸಾ-2 ಮಂಜುನಾಥ್ ಮತ್ತು ಚಾಸಾ- 3 ಸತ್ತಾರ್ ಆಗಿದ್ದಾರೆ. ಹಿರಿಯೂರು-ಚಿತ್ರದುರ್ಗ ರಸ್ತೆ 6 ಪಥದ ರಸ್ತೆ. ಟೋಲ್ ನಿಂದ ಹಿರಿಯೂರು ಕಡೆ 200 ಮೀ ಅಂತರದಲ್ಲಿ ಅಪಘಾತ ನಡೆದಿರುತ್ತದೆ. ಚಿತ್ರದುರ್ಗ ದಿಂದ ಹಿರಿಯೂರು ಕಡೆ ಬರುವ ರಸ್ತೆಯಲ್ಲಿ ಎಡಭಾಗ 18-20 ಅಡಿ ಹೆಚ್ಚುವರಿ ಜಾಗ ಇದ್ದು, ಅಲ್ಲಿ ವಾಹನಗಳು ನಿಲ್ಲುತ್ತವೆ ಮತ್ತು ಅಲ್ಲಿ ಅಂಗಡಿಗಳು ಇವೆ. ಸದರಿ ಜಾಗದ ಎಡಭಾಗಕ್ಕೆ ಸರ್ವಿಸ್ ರೋಡ್ ನಂತರ ಶೌಚಾಲಯಗಳು ಇವೆ. ನಮ್ಮ ವಾಹನ 3 ಪಥದ ರಸ್ತೆಯ ಎಡಭಾಗದಲ್ಲಿ ನಿಂತಿತ್ತು. ವಾಹನದ ಬಳಿ ತಾನು, ಚಾಸಾ-2 ಮತ್ತು 3 ಹಾಗೂ ಮೃತ ಸುರೇಶ್ ಇದ್ದೆವು. ವಾಹನಗಳನ್ನು ತಪಾಸಣೆ ನಡೆಸುವಾಗ ವಾಹನಗಳಿಗೆ ನಿಲ್ಲಿಸುವಂತೆ ಸೂಚನೆ ನೀಡಿ ಎಡಕ್ಕೆ ಕರೆಯುತ್ತೇವೆ. ಅದರಂತೆ ಚಾಸಾ-2 ಮತ್ತು 3 ರವರು ವಾಹನಗಳನ್ನು ಎಡಕ್ಕೆ ಕಳುಹಿಸುವ ಕಾರ್ಯ ಮಾಡುತ್ತಿದ್ದರು. ಮೃತ ಸುರೇಶ್ ಜೀಪ್ ನ ಮುಂಭಾಗ ಇದ್ದರು. ನಮ್ಮ ಜೀಪ್ ಹಿರಿಯೂರು ಕಡೆ ಮುಖ ಮಾಡಿ ನಿಂತಿತ್ತು. ರಸ್ತೆಯ ಮಧ್ಯಭಾಗದಲ್ಲಿ ಅಪಘಾತ ಸಂಭಂವಿಸಿರುತ್ತದೆ. ನಮ್ಮ ಜೀಪ್ 3 ಪಥದ ಎಡಭಾಗದ ಪಥದಲ್ಲಿ ನಿಂತಿತ್ತು, ಸುರೇಶ್ ವಾಹನದ ಮುಂಭಾಗ ನಿಂತಿದ್ದರು. ಸದರಿ ಅಪಘಾತದಿಂದ ನಮ್ಮ ಜೀಪ್‌ಗೆ ಯಾವುದೇ ಹಾನಿಯಾಗಿರುವುದಿಲ್ಲ. ಸದರಿ ದಿನ ಲಾರಿ ಚಾಲಕ ಲಾರಿಯನ್ನು ನಿಲ್ಲಿಸಿದೆ ಹೋಗಿದ್ದರಿಂದ ಆ ದಿನ ಲಾರಿಯನ್ನು

ಯಾರು ಚಾಲನೆ ಮಾಡುತ್ತಿದ್ದರು ಎಂದು ತನಗೆ ಗೊತ್ತಿಲ್ಲ. ಆತನ ಹೆಸರು ಮತ್ತು ವಿಳಾಸ ತನಗೆ ಗೊತ್ತಿರಲಿಲ್ಲ. ಪೋಲಿಸರು ತನಗೆ ಲಾರಿ ಚಾಲಕನ ಹೆಸರನ್ನು ಹೇಳಿರುತ್ತಾರೆ. ಟೋಲ್ ಬಳಿ ವೇಗ ನಿಯಂತ್ರಕ ಹಂಪ್ ಗಳು ಇವೆ. ಹಂಪ್ ಗಳ ಬಳಿ ವಾಹನಗಳು ನಿಲ್ಲಿಸಿ, ಮುಂದೆ ಸಾಗುತ್ತವೆ ಎಂದು ಸ್ಪಷ್ಟವಾಗಿ ಉತ್ತರಿಸಿರುತ್ತಾರೆ.

14. ಫ್ರಾಸಾ–2 ಮಂಜುನಾಥ ಇವರು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ24.05.2019 ರಂದು ತಾನು ಮೃತ ಸುರೇಶ್ ಹಾಗೂ ಚಾಸಾ–1 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ನಾವುಗಳು ನಮ್ಮ ಜೀಪ್ ಸಂ.KA 16–G–3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸಿದೆ ಹೋಗಿರುತ್ತದೆ . ಸದರಿ ಲಾರಿಯ ಸಂಖ್ಯೆ: MH 14 GU 8052 ಆಗಿರುತ್ತದೆ. ಅಪಘಾತದಿಂದಾಗಿ ನಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ಮತ್ತು ಭುಜಕ್ಕೆ ತೀವ್ರವಾಗಿ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ. ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ. ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಎಸ್ ಎಸ್ ಆಸ್ಪತ್ರೆಯ ವೈದ್ಯರು ಬೆಳಗಿನ ಜಾವ 3.00 ಸಮ ಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ. ಅದೇ ದಿನ ಬೆ.6.00 ಗಂಟೆಗೆ ಐಮಂಗಲ ಪೊಲೀಸ್ ಠಾಣೆಯಲ್ಲಿ ಚಾಸಾ–1 ರವರು ದೂರು ದಾಖಲಿಸಿರುತ್ತಾರೆ. ತಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನಿಪಿ–2 ಮತ್ತು ನಿಪಿ–3 ಕ್ಕೆ ಅಪಘಾತದ ದಿನ ಸಂಜೆ 3.30 ಗಂಟೆಗೆ ಸಹಿ ಮಾಡಿರುತ್ತೇನೆ. ಐಮಂಗಲ ಪೋಲಿಸರು ಅಪಘಾತವಾದ ಸ್ಥಳಕ್ಕೆ ತನ್ನನ್ನು ಮತ್ತು ಚಾಸಾ–3 ರವರನ್ನು ಬರಮಾಡಿಕೊಂಡು ನಾನು ತೋರಿಸಿದ ಸ್ಥಳದಲ್ಲಿ ನಿಪಿ–2 ಮತ್ತು 3 ರಂತೆ ಪಂಚನಾಮೆ ಮತ್ತು ಕಚ್ಚಾ ನಕಾಶೆಯನ್ನು ತಯಾರಿಸಿರುತ್ತಾರೆ. ದಿಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಈ ಅಪಘಾತಕ್ಕೆ

ಆರೋಪಿಯ ಅತೀ ವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-2 ರವರನ್ನು ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶ ಹೇಳಿಸುವಲ್ಲಿ ವಿಫಲವಾಗಿರುತ್ತದೆ.

15. ಫ್ರಾಸಾ2 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ದಿಃ24.05.2019 ರಂದು ತಪಾಸಣೆಗೆ ಬೆ.10.30 ಕ್ಕೆ ಹೋಗಿರುತ್ತೇನೆ. ಆ ದಿನ ನಾವು 4 ಜನ ಹೋಗಿರುತ್ತೇವೆ. ನಾವು ನಮ್ಮ ಜೀಪ್ ನ್ನು ಟೋಲ್ ನಿಂದ ಸ್ವಲ್ಪ ಮುಂದೆ ನಿಲ್ಲಸಿದ್ದೆವು. ಸದರಿ ರಸ್ತೆಯ ಎಡಭಾಗದಲ್ಲಿ ನಿಲ್ಲಸಿದ್ದೆವು. ಎಡಭಾಗ 18-20 ಅಡಿ ಹೆಚ್ಚುವರಿ ಜಾಗ ಇದ್ದು, ಅಲ್ಲಿ ವಾಹನಗಳು ನಿಲ್ಲುತ್ತವೆ ಮತ್ತು ಅಲ್ಲಿ ಅಂಗಡಿಗಳು ಇವೆ. ಆ ದಿನ 5-6 ವಾಹನಗಳು ನಿಂತಿದ್ದವು. ಟೋಲ್ ನಿಂದ 50 ಮೀ ಅಂತರದಲ್ಲಿ ನಮ್ಮ ವಾಹನ ನಿಂತಿತ್ತು. ಅಪಘಾತದ ದಿನ ವಾಹನಗಳನ್ನು ತಾನು ಮತ್ತು ಚಾಸಾ-3 ರವರು ತಪಾಸಣೆಗಾಗಿ ವಾಹನಗಳನ್ನು ನಿಲ್ಲಿಸುತ್ತಿದ್ದೆವು. ಮೃತ ಸುರೇಶ್ ಮತ್ತು ಚಾಸಾ-1 ರವರು ನಮ್ಮ ಜೀಪ್ ಪಕ್ಕದಲ್ಲಿ ನಿಂತಿದ್ದರು. ರಸ್ತೆಯ ಎಡಭಾಗದ ಪಥದಿಂದ ಸುಮಾರು 5 ಅಡಿ ದೂರದಲ್ಲಿ ನಮ್ಮ ಜೀಪ್ ನಿಲ್ಲಿಸಿದ್ದೆವು. ಮೃತ ಸುರೇಶ್ ಆ ದಿನ ನಮ್ಮ ಜೀಪ್‌ನ ಮುಂಭಾಗ ನಿಂತಿದ್ದರು. ನಮ್ಮ ಜೀಪ್ ನ್ನು ಹಿರಿಯೂರು ಕಡೆ ಮುಖ ಮಾಡಿ ನಿಲ್ಲಿಸಿದ್ದೆವು. ನಮ್ಮ ಜೀಪ್ ನಿಂದ ಸುರೇಶ್ ಸುಮಾರು 3 ಅಡಿ ದೂರದಲ್ಲಿ ನಿಂತಿದ್ದರು. ಚಾಸಾ-1 ರವರು ಜೀಪ್ ನ ಎಡಭಾಗದ ಡೋರ್ ಬಳಿ ನಿಂತಿದ್ದರು. ಮೃತ ಸುರೇಶ್ ಅವರು ತಪಾಸಣೆಗಾಗಿ ವಾಹನಗಳನ್ನು ನಿಲ್ಲಿಸುತ್ತಿರಲಿಲ್ಲ. ಆ ದಿನ ಹಿರಿಯೂರಿನಿಂದ ಚಿತ್ರದುರ್ಗ ಹೋಗುವ ವಾಹನಗಳನ್ನು ತಪಾಸಣೆ ಮಾಡಿರುವುದಿಲ್ಲ. ಟೋಲ್ ಬಳಿ ವೇಗ ನಿಯಂತ್ರಕ ಹಂಪ್ ಗಳು ಇವೆ. ಹಂಪ್ ಗಳ ಬಳಿ ವಾಹನಗಳು ನಿಲ್ಲಿಸಿ, ಮುಂದೆ ಸಾಗುತ್ತವೆ. ನಾವು ಲಾರಿಯನ್ನು ತಡೆಯಲು ಪ್ರಯತ್ನಿಸಿದ್ದು, ಲಾರಿ ಚಾಲಕ ಲಾರಿಯನ್ನು ನಿಲ್ಲಿಸಲಿಲ್ಲ. ತಾನು ಮತ್ತು ಚಾಸಾ-3 ರವರು ಲಾರಿಯನ್ನು ತಡೆಯಲು ಪ್ರಯತ್ನಿಸಿದೆವು. ಚಾಸಾ-3 ಮೊದಲನೇ ಪಥದಲ್ಲಿ ಇದ್ದರು. ತಾನು ಮಧ್ಯದ ಪಥದಲ್ಲಿ ಇದ್ದೆ. ಆಗ ಮೃತ ಸುರೇಶ್ ಜೀಪ್

ಮುಂದೆಯೇ ಇದ್ದರು. ಸದರಿ ಅಪಘಾತದಿಂದ ನಮ್ಮ ಜೀಪ್‌ಗೆ ಯಾವುದೇ ಹಾನಿಯಾಗಿರುವುದಿಲ್ಲ. ಅಪಘಾತ ದಿನ ಲಾರಿ ಸುಮಾರು 40-50 ಕಿ ಮೀ ವೇಗದಲ್ಲಿ ಬರುತ್ತಿತ್ತು. ಆ ದಿನ ಲಾರಿಯನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ತಾನು ನೋಡಿರುವುದಿಲ್ಲ. ಅಪಘಾತ ದಿನ ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಪೊಲೀಸ್ ಠಾಣೆಯಲ್ಲಿ ಲಾರಿ ಚಾಲಕನನ್ನು ನೋಡಿರುತ್ತೇನೆ. ಬೇರೆ ಸಮಯದಲ್ಲಿ ಲಾರಿ ಚಾಲಕನನ್ನು ತಾನು ನೋಡಿರುವುದಿಲ್ಲ ನಿಪಿ-2 ಮತ್ತು 3 ನ್ನು ಬರೆಯುವ ಸಮಯದಲ್ಲಿ 4-5 ಜನ ಇದ್ದರು. ಅವರ ಹೆಸರು ತನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ಕ್ಕೆ ಎಷ್ಟು ಜನ ಸಹಿ ಮಾಡಿದ್ದಾರೆ ಎಂದು ತನಗೆ ಗೊತ್ತಿಲ್ಲ. ನಿಪಿ-2 ಮತ್ತು 3 ರಲ್ಲಿರುವ ವಿಚಾರಗಳು ತನಗೆ ಗೊತ್ತಿಲ್ಲ. ಪೋಲಿಸರ ಮುಂದೆ ನೀಡಿರುವ ಮರು ಹೇಳಿಕೆಯಲ್ಲಿ ಪೋಲಿಸರ ಮುಂದೆ ಆರೋಪಿ ಹೆಸರು ಮತ್ತು ವಿಳಾಸವನ್ನು ತಾನು ಹೇಳಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ.

16. ಫ್ರಾಸಾ-3 ಸತ್ತಾರ್ ಇವರು ಪ್ರತ್ಯಕ್ಷ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ24.05.2019 ರಂದು ತಾನು ಮೃತ ಸುರೇಶ್ ಹಾಗೂ ಚಾಸಾ-1 ಮತ್ತು 3 ರವರೊಂದಿಗೆ ಗುಯಿಲಾಳು ಟೋಲ್ ಬಳಿ, ವಾಹನ ತಪಾಸಣೆ ಮಾಡುತ್ತಿದ್ದಾಗ, ದಿಃ25.05.2019 ರಂದು ಬೆಳಗಿನ ಜಾವ 12.15 ರ ಸಮಯದಲ್ಲಿ ನಾವುಗಳು ನಮ್ಮ ಜೀಪ್ ಸಂ.KA 16-G-3636 ಬಳಿ ಇದ್ದಾಗ ಒಂದು ಲಾರಿ ಚಿತ್ರದುರ್ಗದ ಕಡೆಯಿಂದ ಹಿರಿಯೂರು ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಜೀಪ್ ಬಳಿ ನಿಂತಿದ್ದ ಸುರೇಶ್ ಅವರಿಗೆ ಡಿಕ್ಕಿ ಪಡಿಸಿ ಲಾರಿಯನ್ನು ನಿಲ್ಲಿಸಿದೆ ಹೋಗಿರುತ್ತದೆ . ಸದರಿ ಲಾರಿಯ ಸಂಖ್ಯೆ: MH-14-GU-8052 ಆಗಿರುತ್ತದೆ. ಅಪಘಾತದಿಂದಾಗಿ ನಮ್ಮ ಡ್ರೈವರ್ ಸುರೇಶ್ ಅವರ ತಲೆಗೆ ಮತ್ತು ಬಲ ಭುಜಕ್ಕೆ ತೀವ್ರವಾಗಿ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ. ಅವರನ್ನು ನಮ್ಮ ಇಲಾಖಾ ವಾಹನದಲ್ಲಿ ಚಿತ್ರದುರ್ಗದ ಬಸವೇಶ್ವರ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ . ನಂತರ ಹೆಚ್ಚಿನ ಚಿಕಿತ್ಸೆಗಾಗಿ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಅಂಬುಲೆನ್ಸ್ ನಲ್ಲಿ ಕರೆದುಕೊಂಡು ಹೋಗಿರುತ್ತಾರೆ. ಪೋಲಿಸರು ಬೆಳಗಿನ ಜಾವ 3.00 ಸಮಯದಲ್ಲಿ ಸುರೇಶ್ ಮೃತಪಟ್ಟರು ಎಂದು ತಿಳಿಸಿರುತ್ತಾರೆ. ಅದೇ ದಿನ ಬೆ.6.00 ಗಂಟೆಗೆ ಐಮಂಗಲ

ಪೊಲೀಸ್ ಠಾಣೆಯಲ್ಲಿ ಚಾಸಾ-1 ರವರು ದೂರು ದಾಖಲಿಸಿರುತ್ತಾರೆ. ಆರೋಪಿಯನ್ನು ನೋಡಿ ಗುರುತಿಸುವುದಿಲ್ಲ. ತಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಈ ಬಗ್ಗೆ ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ಪೋಲಿಸರ ಮುಂದೆ ಯಾವುದೇ ಮರು ಹೇಳಿಕೆ ನೀಡಿರುವುದಿಲ್ಲ. ಈ ಅಪಘಾತಕ್ಕೆ ಆರೋಪಿಯ ಅತೀ ವೇಗ ಮತ್ತು ನಿರ್ಲಕ್ಷತೆಯ ಚಾಲನೆ ಕಾರಣವಾಗಿರುತ್ತದೆ. ಲಾರಿ ಚಾಲಕನ ತಪ್ಪಿನಿಂದ ಈ ಅಪಘಾತ ಸಂಭಂವಿಸಿರುತ್ತದೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ-3 ರವರನ್ನು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ದಿನಾಂಕಃ28.05.2019 ರಂದು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ. ಪೋಲಿಸರು ಸದರಿ ದಿನ ಅಪಘಾತ ಪಡಿಸಿದ ಲಾರಿಯನ್ನು ತೋರಿಸಿರುತ್ತಾರೆ. ದಿನಾಂಕಃ28.05.2019 ರಂದು ಪೋಲಿಸರು ಆರೋಪಿಯನ್ನು ತೋರಿಸಿರುತ್ತಾರೆ ಎಂದು ಉತ್ತರಿಸಿರುತ್ತಾರೆ.

17. ಪ್ರಾಸಾ-3 ರವರನ್ನು ಆರೋಪಿ ಪರ ವಕೀಲರು ಪಾಟೀ ಸವಾಲು ಮಾಡಿದಾಗ ಅವರು ತಮ್ಮ ಪಾಟೀ ಸವಾಲಿನಲ್ಲಿ ದಿಃ24.05.2019 ರಂದು ತಪಾಸಣೆಗೆ ಬೆ.10.30 ಕ್ಕೆ ಹೋಗಿರುತ್ತೇನೆ. ಆ ದಿನ ನಾವು 4 ಜನ ಹೋಗಿರುತ್ತೇವೆ. ನಾವು ನಮ್ಮ ಜೀಪ್ ನ್ನು ಟೋಲ್ ನಿಂದ ಸ್ವಲ್ಪ ಮುಂದೆ ನಿಲ್ಲಸಿದ್ದೆವು. ಸದರಿ ರಸ್ತೆಯ ಎಡಭಾಗದಲ್ಲಿ ನಿಲ್ಲಸಿದ್ದೆವು. ಎಡಭಾಗ 18-20 ಅಡಿ ಹೆಚ್ಚುವರಿ ಜಾಗ ಇದ್ದು, ಅಲ್ಲಿ ವಾಹನಗಳು ನಿಲ್ಲುತ್ತವೆ ಮತ್ತು ಅಲ್ಲಿ ಅಂಗಡಿಗಳು ಇವೆ. ಟೋಲ್ ನಿಂದ 50 ಮೀ ಅಂತರದಲ್ಲಿ ನಮ್ಮ ವಾಹನ ನಿಂತಿತ್ತು . ಅಪಘಾತದ ದಿನ ವಾಹನಗಳನ್ನು ತಾನು ಮತ್ತು ಚಾಸಾ-2 ರವರು ತಪಾಸಣೆಗಾಗಿ ವಾಹನಗಳನ್ನು ನಿಲ್ಲಿಸುತ್ತಿದ್ದೆವು. ಮೃತ ಸುರೇಶ್ ಮತ್ತು ಚಾಸಾ-1 ರವರು ನಮ್ಮ ಜೀಪ್ ಪಕ್ಕದಲ್ಲಿ ನಿಂತಿದ್ದರು. ಮೃತ ಸುರೇಶ್ ಆ ದಿನ ನಮ್ಮ ಜೀಪ್‌ನ ಮುಂಭಾಗ ನಿಂತಿದ್ದರು. ಸದರಿ ಲಾರಿ ಎಷ್ಟು ವೇಗವಾಗಿ ಬರುತ್ತಿತ್ತು ಎಂದು ತನಗೆ ಗೊತ್ತಿಲ್ಲ. ನಮ್ಮ ಜೀಪ್ ನ್ನು ಚಿತ್ರದುರ್ಗದ ಕಡೆ ಮುಖ ಮಾಡಿ ನಿಲ್ಲಿಸಿದ್ದೆವು. ಅಪಘಾತದ ದಿನ ಲಾರಿ ಚಾಲಕನನ್ನು ತಾನು ನೋಡಿರುವುದಿಲ್ಲ. ಆರೋಪಿಯನ್ನು ಅಪಘಾತದ ದಿನವೇ ಪೊಲೀಸ್ ಠಾಣೆಯಲ್ಲಿ

ನೋಡಿರುತ್ತೇನೆ. ತಾನು ಪೋಲಿಸರ ಮುಂದೆ ಮರು ಹೇಳಿಕೆ ನೀಡಿರುತ್ತೇನೆ ಎಂದು ಉತ್ತರಿಸಿರುತ್ತಾರೆ.

18. ಫ್ರಾಸಾ-4 ಅಕ್ಬರ್ ಇವರು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-2 ಮತ್ತು 3 ಕ್ಕೆ ಈಗ ಸುಮಾರು 4 ವರ್ಷಗಳ ಹಿಂದೆ ಐಮಂಗಲ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ನಕಾಶೆ ತಯಾರಿಸಿರುವುದಿಲ್ಲ. ಪಂಚನಾಮೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-4 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶ ಹೇಳಿಸುವಲ್ಲಿ ವಿಫಲವಾಗಿರುತ್ತದೆ.

19. ಫ್ರಾಸಾ-5 ರಂಗನಾಥ ಇವರು ಇನ್ನೋರ್ವ ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿಪಿ-2 ಮತ್ತು 3 ಕ್ಕೆ ಈಗ ಸುಮಾರು 4 ವರ್ಷಗಳ ಹಿಂದೆ ಗುಯಿಲಾಳು ಟೋಲ್ ಪ್ಲಾಜಾದ ಬಳಿ ಸಹಿ ಮಾಡಿದ್ದೇನೆ. ತನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ. ಯಾವುದೇ ನಕಾಶೆ ತಯಾರಿಸಿರುವುದಿಲ್ಲ. ಪಂಚನಾವೆಯಲ್ಲಿ ಬರೆದಿರುವ ವಿಚಾರಗಳು ತನಗೆ ಗೊತಿಲ್ಲ ಎಂದು ಅಭಿಯೋಜನೆಗೆ ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-5 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶ ಹೇಳಿಸುವಲ್ಲಿ ವಿಫಲವಾಗಿರುತ್ತದೆ.

20. ಫ್ರಾಸಾ-6 ಚಂದ್ರಪ್ಪ ಇವರು ಅಮಾನತ್ತು ಪಂಚನಾಮೆ ಸಾಕ್ಷಿದಾರರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ಈಗ 5-6 ವರ್ಷಗಳ ಹಿಂದೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ನಿಪಿ-7 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ-7 ರಲ್ಲಿ ಬರೆದಿರುವ ವಿಚಾರಗಳು ತನಗೆ ಗೊತ್ತಿಲ್ಲ. ತನ್ನ ಸಮಕ್ಷಮ ಯಾವುದೇ ವಾಹನಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದು ಅಭಿಯೋಜನೆಗೆ

ಸಂಪೂರ್ಣವಾಗಿ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-6 ರವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶ ಹೇಳಿಸುವಲ್ಲಿ ವಿಫಲವಾಗಿರುತ್ತದೆ.

21. ಫ್ರಾಸಾ-7 ಈರೇಶ್. ಟಿ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಚಾಸಾ-17 ರವರ ಮೌಖಿಕ ಆದೇಶದ ಮೇರೆಗೆ ಅಪಘಾತ ಪಡಿಸಿದ MH-14-GU-8052 ವಾಹನವನ್ನು ಪತ್ತೆ ಮಾಡಲು ತಿಳಿಸಿದ ಮೇರೆಗೆ ತಾನು ಪತ್ತೆ ಕಾರ್ಯ ಶುರು ಮಾಡಿ, ಹಿರಿಯೂರು-ಬೆಂಗಳೂರು ಬೈಪಾಸ್ ರಸ್ತೆಯಲ್ಲಿ ಸದರಿ ವಾಹನವನ್ನು ಚಾಲಕನ ಸಮೇತ ವಶಕ್ಕೆ ಪಡೆದು ಐಮಂಗಲ ಠಾಣೆಗೆ ತಂದು ಚಾಸಾ-17 ರ ಮುಂದೆ ಹಾಜರು ಪಡಿಸಿರುತ್ತೇನೆ. ಸದರಿ ವಾಹನವನ್ನು ಚಾಸಾ-17 ರವರು ಪಂಚನಾಮೆ ಮೂಲಕ ಚಾಸಾ-6 ಮತ್ತು 7 ರವರ ಸಮಕ್ಷಮ ಬೆ.9.00 ರಿಂದ 9.45 ರವರೆಗೆ ಪಂಚನಾಮೆ ಜರುಗಿಸಿ ಸದರಿ ವಾಹನವನ್ನು ಅಮಾನತ್ತು ಪಡಿಸಿಕೊಂಡರು. ಈ ಕುರಿತು ಚಾಸಾ-17 ರವರ ಮುಂದೆ ಹೇಳಿಕೆ ನೀಡಿದ್ದೇನೆ ಎಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆರೋಪಿತರ ವಕೀಲರ ಪಾಟೀ ಸಾವಲಿನಲ್ಲಿ ಸದರಿ ವಾಹನವು ಬೈಪಾಸ್ ರಸ್ತೆ ಇದ್ದ ಬಗ್ಗೆ ತನಗೆ ಮೊದಲೆ ಮಾಹಿತಿ ಇರಲಿಲ್ಲ ಎಂದು ಉತ್ತರಿಸಿರುತ್ತಾರೆ.

22. ಫ್ರಾಸಾ-8 ಚನ್ನೇಗೌಡ. ಆರ್. ಜಿ ಇವರು ಪೊಲೀಸ್ ಅಧಿಕಾರಿ/ ತನಿಖಾಧಿಕಾರಿ ಇವರು ತಮ್ಮ ಸಾಕ್ಷ್ಯದಲ್ಲಿ ತಮ್ಮ ತನಿಖೆಗೆ ಅನುಗುಣವಾಗಿ, ತನಿಖೆಯ ಬಗ್ಗೆ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

23. ಫ್ರಾಸಾ-9 ದಯಾನಂದ ಇವರು ವಾಹನದ ಮಾಲೀರಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ತಾನು ಲಾರಿ ಸಂಃMH-14-GU-8052 ನೇದ್ದರ ನೋಂದಣಿ ಮಾಲೀಕನಾಗಿರುತ್ತೇನೆ. ಈಗ ಸುಮಾರು 4-5 ವರ್ಷಗಳ ಹಿಂದೆ ಅಪಘಾತದ ಪ್ರಕರಣದಲ್ಲಿ ಪೊಲೀಸರು ತನ್ನ ವಾಹನವನ್ನು ವಶಪಡಿಸಿಕೊಂಡಿದ್ದರು, ತಾನು ಠಾಣೆಗೆ ವಾಹನವನ್ನು ಬಿಡಿಸಿಕೊಳ್ಳಲು ಹೋದಾಗ ಪೊಲೀಸರು ಕೆಲವೊಂದು ದಾಖಲೆಗಳಿಗೆ ತನ್ನ ಸಹಿ ಪಡೆದಿರುತ್ತಾರೆ. ನಿಪಿ-8 ಮತ್ತು 9 ರಲ್ಲಿ ಏನು

ಬರೆದಿದೆ ಎಂದು ತನಗೆ ಗೊತ್ತಿಲ್ಲ ತಾನು ಇಂಡೆಮ್ನಿಟಿ ಬಾಂಡ್ ಬರೆದುಕೊಟ್ಟು ತನ್ನ ವಾಹನವನ್ನು ಬಿಡಿಸಿಕೊಂಡಿರುತ್ತೇನೆ ಎಂದು ಅಭಿಯೋಜನೆಗೆ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಫ್ರಾಸಾ-9 ರವರನ್ನು ಪಾಟೀ ಸವಾಲಿಗೆ ಒಳಪಡಿಸಿಕೊಂಡರೂ ಸಹ ಅಭಿಯೋಜನೆಗೆ ಪೂರಕವಾಗುವಂತಹ ಯಾವುದೇ ಅಂಶ ಹೇಳಿಸುವಲ್ಲಿ ವಿಫಲವಾಗಿರುತ್ತದೆ.

24. ಫ್ರಾಸಾ-10 ಜಿ. ಎಸ್ . ಹೆಗಡೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಪೊಲೀಸ್ ವೃತ್ತ ನಿರೀಕ್ಷಕರು, ಹಿರಿಯೂರು ವೃತ್ತ ಇವರ ಮನವಿಯ ಮೇರೆಗೆ ದಿನಾಂಕಃ20.05.2019 ರಿಂದ ದಿನಾಂಕಃ26.05.2019 ರ ವರೆಗೆ ಚಾಸಾ-1 ಮತ್ತು ಮೃತ ಎಲ್. ಸುರೇಶ್ ರವರ ಕರ್ತವ್ಯ ಧೃಢೀಕರಣ ಪತ್ರವನ್ನು ನೀಡಿರುತ್ತೇನೆ ಎಂದು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

25. ಅಭಿಯೋಜನೆಯು ವಿಚಾರಣೆಗೊಳಪಡಿಸಿಕೊಂಡಿರುವ ಎಲ್ಲಾ ಸಾಕ್ಷಿದಾರರ ಮೌಖಿಕ ಸಾಕ್ಷ್ಯ ಹಾಗೂ ದಾಖಲಾತಿ ಸಾಕ್ಷ್ಯಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಫ್ರಾಸಾ-1 ರವರು ದೂರುದಾರರಿದ್ದು ಫ್ರಾಸಾ-2 ಮತ್ತು 3 ರವರು ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರಾಗಿದ್ದಾರೆ. ಅಭಿಯೋನೆಯ ಪ್ರಕಾರ ಆರೋಪಿಯು ಲಾರಿಯನ್ನು ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿ ರಸ್ತೆಯ ಬದಿಯಲ್ಲಿ ಜೀಪ್ ಮುಂದೆ ನಿಂತ್ತಿದ್ದ ಸುರೇಶ ರವರಿಗೆ ಡಿಕ್ಕಿ ಪಡಿಸಿ ಅಫಾತವಾಗಿದೆ. ಆದರೆ ಫ್ರಾಸಾ-1 ರವರು ಹೇಳಿರುವ ಪ್ರಕಾರ ರಸ್ತೆಯ ಮಧ್ಯ ಭಾಗದಲ್ಲಿ ಅಪಘಾತ ಸಂಭವಿಸಿದೆ. ನಿಪಿ-2 ಸ್ಥಳದ ನಕ್ಷೆಯು ಕೂಡ ಅಪಘಾತದ ರಸ್ತೆ ಮಧ್ಯದಲ್ಲಿ ಸಂಭವಿಸಿದೆ ಎಂಬುದನ್ನು ಖಚಿತ ಪಡಿಸುತ್ತದೆ. ಹೀಗಿರುವಾಗ ಮೃತ ಸುರೇಶ ರವರು ರಸ್ತೆಯ ಎಡ ಭಾಗದ ಬದಿಯಲ್ಲಿ ಜೀಪ್ ಮುಂದೆ ನಿಂತ್ತಿದ್ದರೆ, ಅಪಘಾತ ರಸ್ತೆಯ ಎಡ ಭಾಗದಲ್ಲೇ ಸಂಭವಿಸಿಬೇಕಾತ್ತು. ಆದರೆ ಫ್ರಾಸಾ-1 ಮತ್ತು ನಿಪಿ-2 ರ ಪ್ರಕಾರ ಅಪಘಾತ ರಸ್ತೆಯ ಮಧ್ಯದಲ್ಲಿ ಸಂಭವಿಸಿದೆ. ಆದ್ದುರಿಂದ ಅಪಘಾತ ಹೇಗೆ ಸಂಭವಿಸಿತು ಎಂಬುದರ ಬಗ್ಗೆ ಸಂಶಯ ಉಂಟಾಗುತ್ತದೆ. ಮೃತ ಸುರೇಶ್ ರವರು ಸ್ವತಃ ರಸ್ತೆ ಮಧ್ಯಕ್ಕೆ ಬಂದಿರಬಹುದು ಮತ್ತು ಸಮಯದಲ್ಲಿ ಅಪಘಾತ ಸಂಭವಿಸರಬಹುದು ಎಂಬ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹೀಗಾಗಿ

ಅಪಘಾತವು ಸಂಪೂರ್ಣವಾಗಿ ಆರೋಪಿಯ ತಪ್ಪಿನಿಂದಲೇ ಸಂಭವಿಸಿದೆ ಎಂದು ನಿಶ್ಚತವಾಗಿ ಹೇಳಲು ಸಾಧ್ಯವಿಲ್ಲ.

26. ಅಲ್ಲದೆ ಈ ಪ್ರರಣದಲ್ಲಿ ಅಭಿಯೋಜನೆಯು ಆರೋಪಿ ಮತ್ತು ವಾಹನವನ್ನು ಗುರುತಿಸುವ ಬಗ್ಗೆ ಸ್ಪಷ್ಟವಾದ ಸಾಕ್ಷ್ಯವನ್ನು ನೀಡುವಲ್ಲಿ ವಿಫಲವಾಗಿದೆ. ದೂರುದಾರರಾದ ಪ್ರಾಸಾ-1 ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆರೋಪಿಯನ್ನು ಅಪಘಾತದ ಸಮಯದಲ್ಲಿ ತಾನು ನೋಡಿದ್ದು ನ್ಯಾಯಾಲಯದ ಮುಂದೆ ಸಹ ಆರೋಪಿಯನ್ನು ಗುರುತಿಸಿರುತ್ತಾರೆ. ಆದರೆ ಆರೋಪಿತ ವಕೀಲರ ಪಾಟೀ ಸಾವಲಿನಲ್ಲಿ ಅಪಘಾತದ ದಿನ ಲಾರಿಯನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ತನ್ನ ಗೊತ್ತಿಲ್ಲ ಎಂದು ಸಾಕ್ಷ್ಯ ನುಡಿದಿದ್ದಾರೆ. ಅಲ್ಲದೆ ಪ್ರತ್ಯಕ್ಷ ಸಾಕ್ಷಿದಾರರಾದ ಪ್ರಾಸಾ-2 ಮತ್ತು 3 ರವರು ನ್ಯಾಯಾಲಯದ ಮುಂದೆ ಆರೋಪಿಯನ್ನು ಗುರುತಿಸಿರುವುದಿಲ್ಲ. ಮುಂದುವರೆದು ಪ್ರಾಸಾ-9 ರವರು ಆರೋಪಿತ ಎಂಹೆಚ್-14-ಜಿಯು-8052 ನೇ ಲಾರಿಯ ಮಾಲೀಕರಾಗಿದ್ದು ಅವರು ಸಹ ಅಪಘಾತದ ದಿನ ತನ್ನ ಲಾರಿಯನ್ನು ಯಾರು ಚಾಲನೆ ಮಾಡುತ್ತಿದ್ದರು ಎಂಬ ಬಗ್ಗೆ ಸಾಕ್ಷ್ಯ ನುಡಿದಿರುವುದಿಲ್ಲ. ಆದ್ದರಿಂದ ಅಪಘಾತದ ಸಮಯದಲ್ಲಿ ಆರೋಪಿಯೇ ಸದರಿ ಲಾರಿಯನ್ನು ಚಾಲನೆ ಮಾಡುತ್ತಿದ್ದರು ಎಂದು ತೋರಿಸಲು ಅಭಿಯೋಜನೆಯು ಯಾವುದೇ ವಿಶ್ವಸಾರ್ಹ ಸಾಕ್ಷ್ಯವನ್ನು ಒದಗಿಸಿರುವುದಿಲ್ಲ. ಇನ್ನು ಸ್ಥಳ ಮತ್ತು ಅಮಾನತ್ತು ಪಂಚನಾಮೆ ಸಾಕ್ಷಿದಾರರಾದ ಪ್ರಾಸಾ-4 ರಿಂದ 6 ರವರು ಅವರೂ ಸಹ ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿದ್ದು ಆರೋಪಿತ ವಾಹನವನ್ನು ಸಹ ಗುರುತಿಸುವಲ್ಲಿ ಅಭಿಯೋಜನೆಯು ಸಂಪೂರ್ಣವಾಗಿ ವಿಫಲವಾಗಿರುತ್ತದೆ. ಹೀಗೆ ಈ ಅಪಘಾತದಲ್ಲಿ ಆರೋಪಿ ಮತ್ತು ಲಾರಿಯ ಭಾಗವಹಿಸುವಿಕೆಯನ್ನು ನಿಸ್ಸಂಶಯವಾಗಿ ಸಾಬೀತುಪಡಿಸುವಲ್ಲಿ ಅಭಿಯೋಜನೆಯು ವಿಫಲವಾಗಿರುತ್ತದೆ. ಆದ್ದರಿಂದ ಅಪಘಾತದ ಮೂಲಭೂತ ಅಂಶಗಳಾದ ಆರೋಪಿಯ ಗುರುತು ಮತ್ತು ಅಪಘಾತಕ್ಕೆ ಸಂಭಂದಿಸಿದ ವಾಹನದ ಭಾಗವಹಿಸುವಿಕೆಯನ್ನು ನಿಸ್ಸಂಶಯವಾಗಿ ಸಾಭೀತುಪಡಿಸಿರುವುದಿಲ್ಲ. ಈ ಪ್ರರಣದಲ್ಲಿ ಅಪಘಾತ ನಡೆದ ಸ್ಥಳದ ಬಗ್ಗೆ ಸಂಶಯ, ಆರೋಪಿ ಮತ್ತು ವಾಹನದ ಸಂಭಂದ ಸಂಶಯ ಇವೆಲ್ಲವೂ ಸಹ ಅಭಿಯೋಜನೆಯು ಪ್ರಕರಣದ ಮೇಲೆ

ಗಂಭೀರ ಸಂಶಯವನ್ನು ಮೂಡಿಸುತ್ತವೆ. ಹೀಗೆ ಆರೋಪಿತನ ಮೇಲಿನ ಆರೋಪಗಳು ನಿಸ್ಸಂಶಯವಾಗಿ ಸಾಭೀತಾಗದ ಕಾರಣ, ಸಂಶಯದ ಲಾಭವನ್ನು ನೀಡಿ ಆರೋಪಿತನನ್ನು ಆರೋಪಗಳಿಂದ ದೋಷಮುಕ್ತಗೊಳಿಸುವುದು ಸಮಂಜಸವೆಂದು ಈ ನ್ಯಾಯಾಲಯ ಅಭಿಪ್ರಾಯಕ್ಕೆ ಬರುತ್ತದೆ. ಆದಕಾರಣ, ಮೇಲಿನ ಅಂಶ 1 ರಿಂದ 3 ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

27. **ಅಂಶ ನಂ-4:-** ಮೇಲೆ ಚರ್ಚಿಸಿದ ಎಲ್ಲಾ ಕಾರಣಗಳಿಂದಾಗಿ ಈ ಕೆಳಕಂಡತೆ ಆದೇಶಿಸಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1) ರಡಿಯಲ್ಲಿ ದತ್ತವಾದ ಅಧಿಕಾರವನ್ನು ಉಪಯೋಗಿಸಿ ಕೊಂಡು ಆರೋಪಿತನನ್ನು ಭಾ. ದಂ. ಸಂ. ಕಲಂ 279 ಮತ್ತು 304A ಸಹಕಲಂ 187 ಆಫ್ ಎಂ ವಿ ಆಕ್ಟ್ ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಲಾಗಿದೆ.

ಆರೋಪಿತ ಹಾಗೂ ಆತನ ಜಾಮೀನುದಾರನು ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆ ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ, ನಂತರ ತಿದ್ದುಪಡಿ ಮಾಡಿ ನನ್ನ ಸಹಿಯೊಂದಿಗೆ ಇಂದು ದಿನಾಂಕ 2 ನೇ ಏಪ್ರಿಲ್ 2026 ರಂದು ಮುಕ್ತ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು).

SHRIDHARA H D
Digitally signed by SHRIDHARA H D
Date: 2026.04.08 16:51:12 +0530

**(ಶ್ರೀಧರ ಹೆಚ್ ಡಿ)**

ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ.ಎಫ್. ಸಿ

ನ್ಯಾಯಾಧೀಶರು ಹಿರಿಯೂರು.

:: **ಅನುಬಂಧ** ::

1) ಅಭಿಯೋಜನೆಯ ಪರ ವಿಚಾರಣೆ ಮಾಡಿದ ಸಾಕ್ಷಿಗಳು :

ಪ್ರಾಸಾ-1 **:-** ಉಮೇಶ್. ಪಿ,

ಪ್ರಾಸಾ-2 **:-** ಮಂಜುನಾಥ್,

ಪ್ರಾಸಾ-3 **:-** ಸತ್ತಾರ್,

ಪ್ರಾಸಾ-4 **:-** ಅಕ್ಬರ್,

ಪ್ರಾಸಾ-5 :- ರಂಗನಾಥ್,

ಪ್ರಾಸಾ-6 :- ಚಂದ್ರಪ್ಪ,

ಪ್ರಾಸಾ-7 :- ಈರೇಶ್. ಟಿ,

ಪ್ರಾಸಾ-8 :- ಚನ್ನೆಗೌಡ. ಆರ್. ಜಿ.

ಪ್ರಾಸಾ-9 :- ದಯಾನಂದ,

ಪ್ರಾಸಾ-10 :- ಜಿ. ಎಸ್. ಹೆಗಡೆ,

2) ಅಭಿಯೋಜನೆಯ ಪರ ಗುರುತಿಸಿದ ದಾಖಲೆಗಳು :-

ನಿಪಿ-1 **:-** ದೂರು,

ನಿಪಿ-2 **:-** ಸ್ಥಳ ಪಂಚನಾಮೆ,

ನಿಪಿ-3 **:-** ಕಚ್ಚಾನಕಾಶೆ,

ನಿಪಿ-4 **:-** ಶವತನಿಖಾ ವರದಿ,

ನಿಪಿ-5 :- ಶವಪರೀಕ್ಷಾ ವರದಿ,

ನಿಪಿ-6 **:-** ಐ ಎಂ ವಿ ವರದಿ,

ನಿಪಿ-7 :- ಅಮಾನತ್ತು ಪಂಚನಾಮೆ,

ನಿಪಿ–8 :– ಕಲಂ 133 ರಡಿಯಲ್ಲಿ ಐ ಎಂ ವಿ ನೋಟಿಸು,

ನಿಪಿ–9 :– ಕಲಂ 133 ರಡಿಯಲ್ಲಿ ಐ ಎಂ ವಿ ನೋಟಿಸ್‌ಗೆ ಉತ್ತರ,

ನಿಪಿ–10 :– ಇಂಡಿಮ್ನಿಟಿ ಬಾಂಡ್,

ನಿಪಿ–11 :– ಮನವಿ ಪತ್ರ,

ನಿಪಿ–12 :– ಪ್ರಥಮ ವರ್ತಮಾನ ವರದಿ,

ನಿಪಿ–13 :– ಸ್ವತ್ತಿನ ಪಟ್ಟಿ,

ನಿಪಿ–14 :– ಮನವಿ ಪತ್ರ,

3) ಅಭಿಯೋಜನೆಯ ಪರ ಗುರುತಿಸಲಾದ ಮುದ್ದೆಮಾಲುಗಳು :

--------------ಇರುವುದಿಲ್ಲ---------------

4) ಆರೋಪಿ ಪರ ವಿಚಾರಣೆ ಮಾಡಿದ ಸಾಕ್ಷಿಗಳು ಮತ್ತು ದಾಖಲೆಗಳು

--------------ಇರುವುದಿಲ್ಲ---------------

SHRIDHARA H D

Digitally signed by SHRIDHARA H D
Date: 2026.04.08 16:51:27 +0530

ಸಿ/ಸಿ ಅಪರ ಸಿವಿಲ್ ಮತ್ತು ಜೆ.ಎಂ.ಎಫ್. ಸಿ

ನ್ಯಾಯಾಧೀಶರು ಹಿರಿಯೂರು.